ಧಾರವಾಡ ಜಿಲ್ಲೆಯಲ್ಲಿ 2,97,165 ಜಾನುವಾರು ಘಟಕಗಳಿದ್ದು 59 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇರುತ್ತದೆ. ಜಿಲ್ಲೆಯಲ್ಲಿ ಒಟ್ಟು 110 ಪಶುವೈದ್ಯಕೀಯ ಸಂಸ್ಥೆಗಳಿರುವ ಕಾರಣ ಕೊರತೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಧಾರವಾಡ ಜಿಲ್ಲೆಯಲ್ಲಿ ಒಬ್ಬರು ಸಹಾಯಕ ನಿರ್ದೇಶಕರು ಹಾಗೂ 19 ಪಶುವೈದ್ಯಾಧಿಕಾರಿಗಳು ಸೇರಿದಂತೆ ಒಟ್ಟು 20 ಪಶುವೈದ್ಯರ ಹುದ್ದೆ ಖಾಲಿ ಇರುತ್ತದೆ. ವಿವರಗಳು ಕೆಳಕಂಡಂತಿರುತ್ತದೆ.

ತಾಲ್ಲೂಕು	ಸಹಾಯಕ ನಿರ್ದೇಶಕರು	ಪಶುವೈದ್ಯಾಧಿಕಾರಿಗಳು	ಒಟ್ಟು
ಧಾರವಾಡ	–	3	3
ಹುಬ್ಬಳ್ಳಿ	–	2	2
ಕುಂದಗೋಳ	–	4	4
ಕಲಘಟಗಿ	1	5	6
ನವಲಗುಂದ	–	5	5
ಒಟ್ಟು	**1**	**19**	**20**

ಖಾಲಿ ಇರುವ ಹುದ್ದೆಗಳ ತುಂಬುವ ದಿಸೆಯಲ್ಲಿ 60 ಪಶುವೈದ್ಯಾಧಿಕಾರಿಗಳಿಗೆ ಆದೇಶ ಸಂಖ್ಯೆ : ಪಸಂಮೂ 207 ಪಅಸೆ 2004 ದಿನಾಂಕ : 24–05–2005 ರಲ್ಲಿ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ಪಸಂಮೂ 116 ಪಸಸೆ 2003 ದಿನಾಂಕ : 30–05–05ರಲ್ಲಿ ಸಕ್ರಮಗೊಳಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

<u>ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಕೀಯ ಇಲಾಖೆ ಸಿಬ್ಬಂದಿ</u> :

449 (5257) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರುಗಳು, ಕಾಂಪೌಂಡರ್ ಹಾಗೂ ಕಿರಿಯ ಲೆವೆಲ್ ಸ್ಟಾಫ್ ನೌಕರರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಅಂದಾಜು ಎಷ್ಟು ದಿನಗಳಿಂದ ಈ ಹುದ್ದೆಗಳು ಖಾಲಿ ಇವೆ;

ಇ) ಇದನ್ನು ಭರ್ತಿಮಾಡಲು ಅಥವಾ ರದ್ದು ಪಡಿಸಲು ಸರ್ಕಾರ ಕೈಗೊಂಡಿರುವ ತೀರ್ಮಾನವೇನು; ಭರ್ತಿ ಮಾಡುವುದಾದಲ್ಲಿ ಯಾವ ಕಾಲಮಿತಿಯಲ್ಲಿ ಈ ಕೆಲಸ ಆಗಬಹುದು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ದಿನಾಂಕ : 1–7–2005 ರಂತೆ 4171 ವಿವಿಧ ವೃಂದದ ಹುದ್ದೆಗಳ ಇಲಾಖೆಯಲ್ಲಿ ಖಾಲಿ ಇದ್ದು ವಿವರಗಳು ಈ ರೀತಿ ಇದೆ:–

ಪದನಾಮ	ಖಾಲಿ ಹುದ್ದೆಗಳು
ಸಹಾಯಕ ನಿರ್ದೇಶಕರು	38
ಪಶುವೈದ್ಯಾಧಿಕಾರಿಗಳು	936
ಪಶುವೈದ್ಯಕೀಯ ಮೇಲ್ಚಿಚಾರಕರು	145
ಹಿರಿಯ ಪಶುವೈದ್ಯಕೀಯ ಪರೀಕ್ಷಕರು	330
ಪಶುವೈದ್ಯಕೀಯ ಪರೀಕ್ಷಕರು	509
ಪಶುವೈದ್ಯಕೀಯ ಸಹಾಯಕರು	743
ವಾಹನ ಚಾಲಕರು	86
ಡಿ ದರ್ಜೆ	1384
ಒಟ್ಟು	**4171**

ಆ) ಅಂದಾಜು 3–4 ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ.

ಇ) ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ : 207 : ಪಅಸೇ : 2004 : ದಿನಾಂಕ : 24–05–2005ರಲ್ಲಿ 60 ಪಶುವೈದ್ಯಾಧಿಕಾರಿಗಳಿಗೆ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ : ಪಸಂಮೀ : 116 : ಪಸಸೇ : 2003 : ದಿನಾಂಕ : 30–05–2005ರಲ್ಲಿ ಸಕ್ರಮಗೊಳಿಸಲಾಗಿದೆ.

250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರನ್ನು, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಬೇಕಾಗಿದ್ದು ಇಲಾಖಾ ಮುಂಬಡ್ತಿ ಸಭೆ ದಿನಾಂಕ : 29–06–2005 ರಂದು ನಡೆಸಲಾಗಿದೆ. ಪಶುವೈದ್ಯಕೀಯ ಪರೀಕ್ಷಕರನ್ನು 50:50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಭಾರಿ ವಾಹನ ಚಾಲನೆ ಪರವಾನಗಿ ಪಡೆದ 10 ಡಿ ದರ್ಜೆ ನೌಕರರನ್ನು ವಾಹನ ಚಾಲಕರಾಗಿ ಮುಂಬಡ್ತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

1384 ಡಿ ದರ್ಜೆ ನೌಕರರನ್ನು ಬೇರೆ ಇಲಾಖೆಯಿಂದ ಮರುವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥದ ನೌಕರಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

<u>ಮೈಸೂರು ಕಾಗದ ಕಾರ್ಖಾನೆ ನಿಯಮಿತ ಭದ್ರಾವತಿ ಖಾಸಗೀಕರಣ</u> :

450 (5015) ಶ್ರೀ ಬಿ.ಕೆ. ಸಂಗಮೇಶ್ವರ (ಭದ್ರಾವತಿ) :– ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿಯಲ್ಲಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ಮೈಸೂರು ಕಾಗದ ಕಾರ್ಖಾನೆ (ನಿಯಮಿತ) ವನ್ನು ಖಾಸಗಿಯವರಿಗೆ ವಹಿಸಿಕೊಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯೋಜನೆ ನಡೆಸಲಾಗಿದೆಯೇ;

ಆ) ಈ ಸಂಬಂಧವಾಗಿ ಆಸಕ್ತಿ ತೋರಿಸಿರುವ ಖಾಸಗಿ ಸಂಸ್ಥೆಗಳ ಹೆಸರುಗಳ ವಿವರಗಳೇನು;

ಇ) ಮೈಸೂರು ಕಾಗದ ಕಾರ್ಖಾನೆಯ ಖಾಸಗೀಕರಣಕ್ಕೆ ಸ್ಥಳೀಯ ಕಾರ್ಮಿಕ ಖಾಸಗೀಕರಣಕ್ಕೆ ಸ್ಥಳೀಯ ಕಾರ್ಮಿಕ ಸಂಘಗಳು ಹಾಗೂ ಜನತೆ ವ್ಯಾಪಕ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;